ಕರ್ನಾಟಕ ಸರ್ಕಾರ

# ಕರ್ನಾಟಕ ಸರಕಾರದ ನಡುವಳಿಕೆಗಳು

ವಿಷಯ:- ಚಿಮ್ಮಲಗಿ ಏತನೀರಾವರಿ ಯೋಜನೆಯ ನಾಗಠಾಣಾ ಶಾಖಾ ಕಾಲುವೆ ಅಡಿಯಲ್ಲಿ ಬರುವ ವಿ.ಕಾ.ನಂ. 12ರ ಕಿ.ಮೀ.0.000 ರಿಂದ 4.620ರ ವರೆಗೆ ಹಾಗೂ ಅದರ ಶೀಳುಗಾಲುವೆ ನಂ. 2,6,8,9ರ ಕಾಲುವೆ ನಿರ್ಮಾಣಕ್ಕಾಗಿ (ನೀರಾವರಿ ಯೋಜನೆ) ಜಮೀನುಗಳು ಭೂಸ್ವಾಧೀನ ಕುರಿತು ಸಿಂದಗಿ ತಾಲೂಕಿನ ಮುಳಸಾವಳಗಿ ಗ್ರಾಮದ ಜಮೀನುಗಳ ಭೂಸ್ವಾಧೀನತೆಯ ಪುನರ್‌ವಸತಿ&ಪುನರ್‌ವ್ಯವಸ್ಥೆ ಅಧಿನಿಯಮ-2013 ರನ್ವಯ ಕರಡು ಯಾದಿಯನ್ನು ಅನುಮೋದಿಸುವ ಕುರಿತು.

ಓದಲಾಗಿದೆ:- 1}ಭೂಸ್ವಾಧೀನ ಕಾಯ್ದೆ 2013ರ ಕಲಂ 11(1)ಕ್ಕೆ ಅನುಸಾರವಾಗಿ ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ:ವಿಜಿಜ/ಭೂಸ್ವಾ/ಸಿಆರ್: 36/2018-19 ದಿನಾಂಕ:18-12-2018

2}ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ & ಪುನರ್‌ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಕುರಿತು.

3}ಸರ್ಕಾರದ ಆದೇಶ ಸಂಖ್ಯೆ: ಕಂಇ:18:ಆರ್‌ಇಹೆಚ್:2014: ಬೆಂಗಳೂರು ದಿನಾಂಕ:06-02-2014.

4}ಸರ್ಕಾರದ ಆದೇಶ ಸಂಖ್ಯೆ: ಕಂಇ:43:ಎನ್‌ಎಂಎಸ್:2017: ಬೆಂಗಳೂರು ದಿನಾಂಕ:04-11-2017.

5}ಪುನರ್‌ವಸತಿ ಅಧಿಕಾರಿಗಳು, ಕೃ.ಮೇ.ಯೋ. ಆಲಮಟ್ಟಿ ಇವರ ಪತ್ರ ಸಂಖ್ಯೆ:526 ದಿ:23-07-2019 (ಸ್ವೀಕೃತಿ ದಿನಾಂಕ:02-08-2019)

6}ಮಹಾ ವ್ಯವಸ್ಥಾಪಕರು,ಪುನರ್‌ವಸತಿ&ಪುನರ್‌ನಿರ್ಮಾಣ,ಕೃಮೇಯೋ, ಬಾಗಲಕೋಟ ಇವರ ಕಲಂ17(2)ರಡಿ ಶಿಫಾರಸ್ಸು ದಿ:03-~~08~~10-2019

0-0-0

ಆದೇಶ ಸಂ:ಆಕಂಇ/ಭೂಸ್ವಾ&ಪುಪ/ಸಿಆರ್-69/2018-19/958 ದಿನಾಂಕ:11-~~09~~10-2019

ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ಆಲಮಟ್ಟಿ ಇವರಿಂದ ಬಂದಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಚಿಮ್ಮಲಗಿ ಏತನೀರಾವರಿ ಯೋಜನೆಯ ನಾಗಠಾಣಾ ಶಾಖಾ ಕಾಲುವೆ ಅಡಿಯಲ್ಲಿ ಬರುವ ವಿ.ಕಾ.ನಂ. 12ರ ಕಿ.ಮೀ.0.000 ರಿಂದ 4.620ರ ವರೆಗೆ ಹಾಗೂ ಅದರ ಶೀಳುಗಾಲುವೆ ನಂ. 2,6,8,9ರ ಕಾಲುವೆ ನಿರ್ಮಾಣಕ್ಕಾಗಿ (ನೀರಾವರಿ ಯೋಜನೆ) ಜಮೀನುಗಳು ಭೂಸ್ವಾಧೀನ ಕುರಿತು ಸಿಂದಗಿ ತಾಲೂಕಿನ ಮುಳಸಾವಳಗಿ ಗ್ರಾಮದ ಜಮೀನುಗಳು ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ಭೂಮಾಲಿಕರ ಜಮೀನುಗಳ ಜೆ.ಎಂ.ಸಿ. ಪ್ರಕಾರ ಒಟ್ಟು: **57-04-00** (-) **0-08-08=56-35-08** ಎ/ಗುಂಟೆ/ಆ ಕ್ಷೇತ್ರದ ಪೈಕಿ ಪೂರ್ಣ ಕ್ಷೇತ್ರಕ್ಕೆ ನೂತನ ಕಾಯ್ದೆ ಕಲಂ 16(2) ನೇದ್ದರ ಮೇರೆಗೆ ಗಣತಿ ಕಾರ್ಯವನ್ನು ಕೈಗೊಂಡು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಯಾದಿಯನ್ನು ತಯಾರಿಸಿದ್ದಾರೆ.

ವಿಶೇಷ ಭೂಸ್ವಾಧೀನಾಧಿಕಾರಿ, ಕೃ.ಮೇ.ಯೋ. ಇಂಡಿ ಇವರನ್ನು ಈ ಯೋಜನೆಗೆ ಕಾರ್ಯವನ್ನು ನಿರ್ವಹಿಸಲು ನೇಮಿಸಲಾಗಿದೆ ಮತ್ತು ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಆದೇಶಿಸುವ ಅಧಿಕಾರವನ್ನು ನೀಡಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ-2013ರ ಕಲಂ 16(6)ರ ಅನುಗುಣವಾಗಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಹಾಗೂ ಭೂಸ್ವಾಧೀನ ಕಾಯ್ದೆ 2013ರ ಕಲಂ 45 ರಡಿ ಪ್ರಕರಣದಲ್ಲಿ ಸದರಿ ಭೂಸ್ವಾಧೀನ ಪ್ರಕರಣದಲ್ಲಿ ಒಳಗೊಂಡ ಕ್ಷೇತ್ರವು 100 ಎಕರೆಗಿಂತ ಕಡಿಮೆ ಇರುವುದರಿಂದ ಅನ್ವಯಿಸುವುದಿಲ್ಲ.

**....2ಕ್ಕೆ**

ನೂತನ ಭೂಸ್ವಾಧೀನ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಕಾಯ್ದೆ 2013ರ ಕಲಂ 16(3)ರಡಿ ತಯಾರಿಸಲಾದ ಗಣತಿ ಯಾದಿಯಲ್ಲಿ ಜೆ.ಎಂ.ಸಿ. ಪ್ರಕಾರ ಒಟ್ಟು: **57-04-00(-)0-08-08=56-35-08** ಎ/ಗುಂಟೆ/ಆ ಪೂರ್ಣ ಕ್ಷೇತ್ರ ಜಮೀನು ಸ್ವಾಧೀನಕ್ಕೆ ಒಳಪಡುತ್ತಿದ್ದು, ಈ ಪೈಕಿ **ಒಟ್ಟು: 71 ಕುಟುಂಬ** ಬಾಧಿತಗೊಳ್ಳುತ್ತಿದ್ದು, ಪ್ರಸ್ತುತ ನೂತನ ಭೂಸ್ವಾಧೀನ ಕಾಯ್ದೆ ಅನುಸಾರ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾದ ಕ್ಷೇತ್ರವನ್ನು ಪರಿಗಣಿಸಿ ಯಾವುದೇ ಕುಟುಂಬಗಳು ಅವರು ಹೊಂದಿದ ಕ್ಷೇತ್ರಕ್ಕಿಂತ ಬಹುಪಾಲು ಭೂಮಿಯನ್ನು ಕಳೆದುಕೊಳ್ಳುವುದಿಲ್ಲ ಹಾಗೂ ಜೀವನೋಪಾಯ ನಷ್ಟತೆಯನ್ನು ಹೊಂದುವುದಿಲ್ಲ ಎಂಬುದರ ಬಗ್ಗೆ ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ಆಲಮಟ್ಟಿ ರವರು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆಯ ಯೋಜನೆಯ ಕರಡು ಯಾದಿಯನ್ನು ತಯಾರಿಸಿ ದೃಢಪಡಿಸಿಕೊಂಡಿದ್ದಾರೆ.

ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ಆಲಮಟ್ಟಿ ಇವರು ಶಿಫಾರಸ್ಸು ಮಾಡಿರುವ ಯಾದಿಯನ್ನು ಆಧರಿಸಿ, ನೂತನ ಭೂಸ್ವಾಧೀನ ಕಾಯ್ದೆ 2013ರ ಕಲಂ 84 ರನ್ವಯ ಸೌಲಭ್ಯ ಪಡೆಯುವ ಕುಟುಂಬವು ಸುಳ್ಳು ಮಾಹಿತಿ ನೀಡಿದಲ್ಲಿ ಕಲಂ 84 (1) (2) ಹಾಗೂ (3) ರನ್ವಯ ಶಿಕ್ಷೆಗೆ ಗುರಿಪಡಿಸಲಾಗುವುದೆಂಬ ಷರತ್ತಿಗೆ ಒಳಪಟ್ಟು ಪುನರ್‌ವ್ಯವಸ್ಥೆ ಯೋಜನೆಯ ಪ್ರಸ್ತಾವನೆಯನ್ನು ನೂತನ ಕಾಯ್ದೆ ಕಲಂ 18ರಡಿ ಅನುಮೋದಿಸಲಾಗಿದೆ.

ಕಾಯ್ದೆ ಕಲಂ 41(6)ರಡಿ ಅನುಸೂಚಿತ ಪಂಗಡ ಹಾಗೂ ಬುಡಕಟ್ಟು ಜನಾಂಗಗಳಿಗೆ ಭೂಸ್ವಾಧೀನ ಪ್ರಕರಣಗಳು ಒಳಪಟ್ಟಿದ್ದಲ್ಲಿ ಸ್ವಾಧೀನದ ಸ್ವತ್ತುಗಳ ಶೇಕಡಾ 1/3 ರಷ್ಟು ಪರಿಹಾರಧನವನ್ನು ಸ್ವಾಧೀನ ಪೂರ್ವದಲ್ಲಿ ಬಾಧಿತ ಕುಟುಂಬಗಳಿಗೆ ಪಾವತಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಆಯುಕ್ತರು,
ಪುಪು ಮತ್ತು ಭೂಸ್ವಾಧೀನ, ಕೃಮೇಯೋ,
ಹಾಗೂ ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು,
ಕರ್ನಾಟಕ ಸರಕಾರ, ಕಂದಾಯ ಇಲಾಖೆ,
ನವನಗರ, ಬಾಗಲಕೋಟೆ.

<u>ಪ್ರತಿಯನ್ನು:-</u>

1) ಜಿಲ್ಲಾಧಿಕಾರಿಗಳು ವಿಜಯಪುರ ಜಿಲ್ಲೆ, ವಿಜಯಪುರ ಇವರಿಗೆ ಮಾಹಿತಿಗಾಗಿ ರವಾನಿಸಿದೆ.
2) ಮಹಾ ವ್ಯವಸ್ಥಾಪಕರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃ.ಮೇ.ಯೋ. ಬಾಗಲಕೋಟೆ
3) ವಿಶೇಷ ಜಿಲ್ಲಾಧಿಕಾರಿ, ಪುಪು/ಭೂಸ್ವಾಧೀನ, ಕೃ.ಮೇ.ಯೋ. ಜಮಖಂಡಿ ಇವರಿಗೆ
4) ಉಪ ವಿಭಾಗಾಧಿಕಾರಿ, ಉಪ ವಿಭಾಗ, ಇಂಡಿ ಇವರಿಗೆ
5) ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ಆಲಮಟ್ಟಿ ಇವರಿಗೆ ಸಂಬಂಧಪಟ್ಟ ಕಡತದೊಂದಿಗೆ ಹಿಂದಿರುಗಿಸಲಾಗಿದೆ.
6) ವಿಶೇಷ ಭೂಸ್ವಾಧೀನಾಧಿಕಾರಿ, ಕೃ.ಮೇ.ಯೋ. ಇಂಡಿ ಇವರಿಗೆ ಸೂಕ್ತ ಕ್ರಮಕ್ಕಾಗಿ ಹಾಗೂ ಸದರಿ ಆದೇಶವನ್ನು ಸಂಬಂಧಿಸಿದ ಗ್ರಾಮಪಂಚಾಯತಿಗೆ ರವಾನಿಸಲು ಸೂಚಿಸಿದೆ.
7) ತಹಶೀಲ್ದಾರರು, ಸಿಂದಗಿ ತಾಲೂಕ ಇವರಿಗೆ
8) ಪಂಚಾಯ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ, _______ ತಾ: ಸಿಂದಗಿಇವರಿಗೆ.
9) Web site: www.bagalkot.nic.in/ukp. ಅಂತರಜಾಲದಲ್ಲಿ ಅಳವಡಿಸಲು ಸಿಸ್ಟಂ ಮ್ಯಾನೇಜರ, ಕಂಪ್ಯೂಟರ ವಿಭಾಗ ಪು ಮತ್ತು ಪು. ಕೃ.ಮೇ.ಯೋ. ನವನಗರ, ಬಾಗಲಕೋಟೆ ಇವರಿಗೆ.
10) ರಕ್ಷಾ ಕಡತಕ್ಕೆ.